# ಯುಗಾದಿಗಳ ಹಾದಿಯಲ್ಲಿ

ಒಂದರ ಹಿಂದೊಂದು ಜನ್ಮತಳೆವ ಸಾಗರದ ನಿರಂತರ ಅಲೆಗಳಂತೆ ವಾಹನಗಳ ತೀರದ ಸಾಲು. ಹಸಿರಿಗೆ ಕಾಯುತ್ತಾ, ಉದಾಸೀನದಿಂದ ಮೈಮುರಿಯುತ್ತ, ಎಫ್ಫೆಮ್ಮಿನ ಹುಡುಗಿಯ ಮಾತುಗಳಲ್ಲಿ ಬೇಸರ ಕಳಕೊಳ್ಳುತ್ತ, ಕ್ಷಣವೊಂದನ್ನು ಯುಗದಂತೆ ಭಾವಿಸುತ್ತಿರುವಾಗ್ಗೆ ಅದೇನದು ಸುವಾಸನೆ? ಅದು, ಮಳೆ ನಿಂತ ನೆಲದಿಂದ ಸಿಹಿಗಾಳಿ ಹೊತ್ತು ತಂದ ಹಿತವಾದ ಗಮಲು. ಆ ಗಮಲಿಗೆ ಮೈಯೊಪ್ಪಿಸಿಕೊಳ್ಳುತ್ತ ಕತ್ತು ಹೊರಳಿಸಿದರೆ ಅಲ್ಲಿ ತೆರೆದುಕೊಂಡಿದೆ ಇಳೆಗಿಳಿದ ನಂದನದ ಒಂದು ತುಣುಕು. ಅರೆ, ಬಂದೆ ಬಿಟ್ಟಿತೆ ಮತ್ತೊಂದು ಯುಗಾದಿ; ಕಂದಳರಿನ ಬೆರಳ ಹಿಡಿದು, ಪ್ರಕೃತಿಯ ಕದಕದಗಳ ಮಿಡಿದು!

ರಸ್ತೆ ಪಕ್ಕದ ಹೊಂಗೆ ಮರ ಮೈತುಂಬ ಬಿಳಿ–ಕಂದು ಹೂಗಳ ಮುಡಿದಿದೆ. ಆ ಹೊಂಗೆ ಹೂವ ತೊಂಗಲಲ್ಲಿ ಭೃಂಗದ ಮೆರವಣಿಗೆ. ಅದರ ಪಕ್ಕದಲ್ಲೇ ಮತ್ತೊಂದು ಹೂಮರ. ನಿರಾಭರಣ ಸುಂದರಿಯೊಬ್ಬಳು ಉದಾಸೀನದಿಂದ ಬಿಸಾಡಿದ ಆಭರಣಗಳಂತೆ ನೆಲದ ಮೇಲೆಲ್ಲ ನೀಲಿ ಹೂಗಳ ಮೆತ್ತನೆ ಹಾಸಿಗೆ. ಆ ಹಸಿರ ದಿಬ್ಬಣ, ದುಂಬಿಗಳ ಮೆರವಣಿಗೆ, ಹೂಹಾಸು, ಇವೆಲ್ಲ ಯುಗಾದಿಯ ಸ್ವಾಗತಕ್ಕೇನಾ? ಓಡುನಡಿಗೆಯ ನಾವು ಮರೆತರೇನು, ಮಾಗಿ ತಲೆ ಮೆಟ್ಟಿ ಬರುವ ಯುಗಾದಿಯ ನೆನಪು ಪ್ರಕೃತಿಗಿದ್ದೇ ಇದೆ.

ಕಳೆದ ವರ್ಷವಷ್ಟೇ ಈ ರಸ್ತೆಯಿಕ್ಕೆಲಗಳ ಅನೇಕ ಮರಗಳು ಅಗಲಗೊಂಡ ರಸ್ತೆಗೆಂದು ಆತ್ಮಾರ್ಪಣೆ ಮಾಡಿಕೊಂಡಿದ್ದವು. ಹಸಿರು ಬಿಡಿಸುವ ನೆಳಲ ಜಾಗದಲ್ಲಿ ಡಾಂಬರಿನ ಕಪ್ಪು. ಈ ರಸ್ತೆಯಲ್ಲಿ ಹಾದುಹೋದಾಗಲೆಲ್ಲ ಎದೆಯಲ್ಲೊಂದು ನೋವಿನ ಎಳೆ. ಇಲ್ಲೇ, ಈ ರಸ್ತೆಯ ಪಕ್ಕದಲ್ಲೇ ಹಸಿರಿನ ಮತ್ತೊಂದು ತುಣುಕು ಇನ್ನೂ ಉಳಿದಿದೆ. ಆ ಹಸಿರು ಚೈತ್ರದ ಮಾಂತ್ರಿಕ ಸ್ಪರ್ಶದಿಂದ ನಳನಳಿಸುತ್ತಿದೆ. ಕವಿ ಗೋಪಾಲಕೃಷ್ಣ ಅಡಿಗರು ಹೇಳಿದಂತೆ, 'ಹೊಸತನವೆ ಜೀವನದ ಪ್ರಗತಿಯ ರಹಸ್ಯ/ ಹೊಸತನವೆ ಮನುಜತೆಯ ಮೈಸಿರಿಯ ಲಾಸ್ಯ!'. ಕವಿಯ ಮಾತಿನ ಸಾಕ್ಷಾತ್ಕಾರದಂತೆ ಕೊಂಬೆರೆಂಬೆಗಳಲ್ಲಿ ಹೊಸ ಹಸಿರು; ಹೊಸ ನೆತ್ತರ ಉಕ್ಕು.

'ಯುಗಾದಿ ಮರಳಿ ಬರುತಿದೆ' ಎಂದು ಪ್ರಕೃತಿಯೇನೋ ಹೊಸ ಬಣ್ಣ ತೊಟ್ಟು ಸಂಭ್ರಮಿಸಬಹುದು. ಆದರೆ ನಾವು? ಬದುಕು ಎಲ್ಲಿಗೆ ಬಂದು ನಿಂತಿದೆ ನೋಡಿ. ಗಡಿಯಾರ ಬೆನ್ನಿಗೆ ಕಟ್ಟಿಕೊಂಡ ದಿನಗಳಲ್ಲಿ ಬದುಕೆನ್ನುವುದು ಬೊಗಸೆ ತುದಿಯ ಕುದುರೆ. ಉಳಿವಿಗಾಗಿ ನಿರಂತರ ಕಲಿಕೆ; ಕಲಿತದ್ದು ಅರಗುವ ಮುನ್ನವೇ ಕಕ್ಕುವ ಅನಿವಾರ್ಯ; ಯೌವನದ ಹುಮ್ಮಸ್ಸು ಹರಳುಗಟ್ಟುವ ಮೊದಲೇ ಇಣುಕುತ್ತದೆ ಕೂದಲ ಬಿಳಿ!

'ಯುಗಾದಿಗಳ ಹಾದಿಯಲ್ಲಿ' ಕವಿ ಜಿ.ಎಸ್. ಶಿವರುದ್ರಪ್ಪ ಕಂಡ ಚಿತ್ರಗಳು ನಮ್ಮೆಲ್ಲರ ಚಿತ್ರಗಳೂ ಅಲ್ಲವೇ?

'ಯುಗಾದಿಗಳ ಹಾದಿಯಲ್ಲಿ
ಇದ್ದ ಮರವನ್ನೆಲ್ಲ ಯಾರೊ ಕಡಿದಿದ್ದಾರೆ;
ನೆರಳಿಲ್ಲ, ಹಕ್ಕಿಗಳ ದನಿಯಿಲ್ಲ
ಬೆಟ್ಟ–ಘಟ್ಟಗಳ ಮೈಯಲ್ಲಿ ಹಸುರೇ ಇಲ್ಲ
ಬಿಸಿಲು, ಬಿಸಿಲೋ ಬಿಸಿಲು, ಸುಡುವ ಬಿಸಿಲು.
ಸರ್ಕಾರ ಅಲ್ಲಲ್ಲಿ ನೆಟ್ಟಿರುವ ಈ ಸಸಿಗಳೆಲ್ಲಾ ಬೆಳೆದು
ಹಸಿರು ಮೂಡುವುದಕ್ಕೆ
ಪ್ರಭವ– ವಿಭವ– ಶುಕ್ಲ– ಪ್ರಮೋದೂತಗಳ
ಎಣಿಸುತ್ತ ಕಾಯೋಣವೇ ಇನ್ನು ಮುಂದಕ್ಕೆ?'

ನೆನಪಿನ ಪುಟಗಳ ದೂಳು ಹೊಡೆಯಿರಿ. ಹಬ್ಬದ ಜೋಕಾಲಿ, ಮಾವಿನ ತೋರಣ, ಬೇವಿನ ಕಹಿ–ಬೆಲ್ಲದ ಸಿಹಿ, ಅಮ್ಮ ಹೊಸಬಟ್ಟೆ ತೊಡಿಸಿ ತಿದ್ದಿದ ಕ್ರಾಪು, ಹೋಳಿಗೆಯುಂಡು ಹೊಸವರ್ಷದ ಮೊದಲ ದಿನ ಅದೃಷ್ಟ ಪರೀಕ್ಷೆಗೆ ಹೊರಟ ಅಪ್ಪ, ವರ್ಷದ ಗೋಚಾರ ಫಲ ಕೇಳುವ ಅಜ್ಜಿ, ಬಾಗಿಲ ನೆತ್ತಿಯಲ್ಲಿ ನಗುವ ಮಾವಿನ ತೋರಣ – ಹಬ್ಬದ ಸಂಭ್ರಮಕ್ಕೆ ಎಷ್ಟೊಂದು ಮುಖ.

ಬೇಡ ಭೂತದ ಹಳಹಳಿ ಎನ್ನುತ್ತದೆ ಮನಸ್ಸು. ಇದು ಮಾಹಿತಿ ತಂತ್ರಜ್ಞಾನ ಯುಗ. ಇಂದು ಇಂದಿಗೇ ಹಳತೆನ್ನಿಸುವ ಜಮಾನ. ಇಂಥ ಸಂದರ್ಭದಲ್ಲಿ ಹೊಸ ವರ್ಷ, ಹೊಸ ಸಂಭ್ರಮ ಎನ್ನುವುದಕ್ಕೆ ಅರ್ಥವಾದರೂ ಎಲ್ಲಿ?

ಕವಿ ಗೋಪಾಲಕೃಷ್ಣ ಅಡಿಗರು 'ಯುಗಾದಿ' ಕವಿತೆಯಲ್ಲಿ ಹೇಳುವುದು ಹೀಗೆ:

'ಎಲ್ಲ ಕಡೆ ಹೊಂಬೆಳಕು; ಹೊಗೆ ಗಿರಣಿಯಲಿ;
ಬಸ್ಸು ಹೊರಟಿತು ಕಡುಬಿನಟ್ಟರಟ್ಟ;
ಮಿಲ್ಲುಗೇಟಿಗೆ ಇರುವೆ ಸಾಲು ಜನ; ಬಗಲಲ್ಲಿ
ಪುಸ್ತಕದ ಚೀಲದೆಳೆನೆಗೆಯ ಓಟ.
ಸೂರ್ಯನಿಗು ಏನೊ ದಿಲ್‌ದಾರತನ ಅವನ;
ಮೋರೆ ತಿವಿದರು ಮೋಡ ನಕ್ಕು ನಡೆದ.'

ನಕ್ಕು ಮುನ್ನಡೆದದ್ದು ಮೋಡ ಮಾತ್ರವಾ? ನಮ್ಮೆಲ್ಲರದು ಮುನ್ನಡೆವ ಆಟವೇ... ಕೆಡುಕುಗಳ ಕಹಿಯ ಮರೆತು ಒಳ್ಳೆಯದರ ನಿರೀಕ್ಷೆಯಲ್ಲಿ ಮುನ್ನಡೆಯುವುದೇ ಹಬ್ಬದ ಉದ್ದೇಶವಲ್ಲವೇ?

ಬಸವಳಿದು ಬೋಳಾಗಿದ್ದ ಪ್ರಕೃತಿ ಚೈತ್ರದಲ್ಲಿ ಮೈದುಂಬಿಕೊಂಡಿದೆ. ಹಸುರು, ಹಸುರುಕಂಠದ ಕುಕಿಲು, ಹೂಸಿರಿ, ಬಿಸಿಲಕೋಲು, ಆಗಸದಲ್ಲಿ ಯಾರೋ ಹರಿದು ಬಿಸುಟ ಖಾಲಿ ಹಾಳೆಗಳ ತುಣುಕುಗಳಂಥ ಮೋಡ – ಪ್ರಕೃತಿಯ ಜೀವನೋತ್ಸಾಹ ಅಗಣಿತ. ಕಳಕೊಳ್ಳುತ್ತ ತುಂಬಿಕೊಳ್ಳುತ್ತ ಸಾಗುವ ಬದುಕೂ ಪ್ರಕೃತಿಯಂತೆಯೇ. ಜಗತ್ತು ಚಿಕ್ಕದು; ಬದುಕು ದೊಡ್ಡದೆನ್ನುವ ಮಾಯದ ದಿನಗಳ ಬದುಕು ನಮ್ಮದು. ಇಲ್ಲಿಯೇ ಬೇರು; ಚಿಗುರು ಮತ್ತೆಲ್ಲೊ?

ಕಾಲ ಬದಲಾಗಿದೆ ಎನ್ನುವಂತಿಲ್ಲ. ಬದಲಾಗಿರುವುದು ದೃಷ್ಟಿಕೋನ. ಭೋಗದ ಹಿಂದೆ ಬಿದ್ದ ಮನಸ್ಸಿಗೆ ತಕ್ಕಂತೆ ಕಾಲವೂ ಬಣ್ಣಗೆಟ್ಟಂತೆ ಕಾಣುತ್ತದೆ. 'ಯಾಕಿಷ್ಟು ವಿಕೃತನಾಗಿದ್ದಾನೆ ಮನುಷ್ಯ/ ಇಂಥ ಚೆಲುವಿನ ನಡುವೆ?' ಎನ್ನುತ್ತಾರೆ ಜಿಎಸ್ಸೆಸ್. ವಸಂತನ ಸ್ಫೂರ್ತಿ ಸಂಚಾರದ ಯುಗಾದಿ ಮನುಷ್ಯನ ವಿಕೃತಿ ಕಳೆಯಲಿ. ಎಲ್ಲ ಬದುಕುಗಳಲ್ಲಿ ಯುಗಾದಿಯ ಚೈತನ್ಯ ಪ್ರವಹಿಸಲಿ.

■ **ಚಂಪಕಮಾಲಾ**

## ಮಾತೇ ಮುತ್ತು

- ನಾವು ನಂಬುವ ತತ್ವಗಳಿಗಿಂತ, ದೇವರಿಗಿಂತ, ನಾವು ಬದುಕುವ ರೀತಿ ಮುಖ್ಯ.

  —ಎ.ಎನ್. ಮರ್ತಿರಾವ್

- ಬಲಿಷ್ಠತೆ ಎನ್ನುವುದು ನಿಮ್ಮ ದೈಹಿಕ ಸಾಮರ್ಥ್ಯದಿಂದ ಬರುವಂಥದ್ದಲ್ಲ; ಅದು ಅದಮ್ಯ ಅಂತಃಶಕ್ತಿಯಿಂದ ಬರುವಂಥದ್ದು.

  —ಮಹಾತ್ಮ ಗಾಂಧಿ

- ಬೇರೆಯವರನ್ನು ತೆಗಳುವುದರಿಂದ ನಿಮ್ಮ ವ್ಯಕ್ತಿತ್ವಕ್ಕೇ ಹೆಚ್ಚು ಕುಂದುಂಟಾಗುತ್ತದೆ.

  —ಶಿವರಾಮ ಕಾರಂತ

- ಅನ್ನವನು ಇಕ್ಕುವ ಅನ್ಯಜಾತನೆ ಕುಲಜ.

  —ಸರ್ವಜ್ಞ

- ಎಲ್ಲವೂ ದೀರ್ಘಕಾಲ ಬಾಳುತ್ತದೆ, ಆದರೆ ಯಾವುದೂ ಹಳೆಯದಲ್ಲ.

  —ಬೆಂಜಮಿನ್ ಫ್ರಾಂಕ್ಲಿನ್

- ಅತೃಪ್ತ ಗ್ರಾಹಕರೇ ನಿಮ್ಮ ಕಲಿಕೆಯ ಅತಿದೊಡ್ಡ ಮೂಲ.

  —ಬಿಲ್ ಗೇಟ್ಸ್

- ಮಾನವ ಭೂಮಿಯ ಮೇಲೆ ಇದ್ದುಕೊಂಡು ಸ್ವರ್ಗವನ್ನು ಗೆಲ್ಲುವ ಸಾಧನೆ ಮಾಡಬೇಕು.

  —ವಿ.ಕೃ. ಗೋಕಾಕ

- ನಾವು ಹುಟ್ಟಿದ ಸಮಾಜಕ್ಕೆ ಸಲ್ಲಿಸಬೇಕಾದ ಋಣ ಸಮಾಜ ಸೇವೆ.

  — ಟಿ.ಪಿ. ಕೈಲಾಸಂ